ಫ್ಯಾಕ್ಸ್ : 080-23332521 ಕನ್ನಡ ಕಾಯಕ ವರ್ಷ ದೂರವಾಣಿ : 080-23332521/23330153(259)

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಆಡಳಿತಾಧಿಕಾರಿಗಳ ಕಛೇರಿ ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು – 560 065

ಸಂಖ್ಯೆ: ಆಕ/ಸಾ.ವಿ./ಕೋವಿಡ್/2021-22 ದಿನಾಂಕ: 21-04-2021

## ಸುತ್ತೋಲೆ

ವಿಷಯ: ಕೋವಿಡ್-19 ಕೋರೋನಾ ವೈರಾಣು ಅತೀ ವೇಗವಾಗಿ ಹರಡುತ್ತಿರುವ ಹಿನ್ನಲೆಯಲ್ಲಿ ಸರ್ಕಾರವು ಹೊರಡಿಸಿರುವ ನಿರ್ಬಂಧಗಳ ಕುರಿತು.

ಉಲ್ಲೇಖ:
1 ಮುಖ್ಯ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು, ರಾಜ್ಯ ಕಾರ್ಯಕಾರಿ ಸಮಿತಿ ಕರ್ನಾಟಕ ಸರ್ಕಾರದ ಸಚಿವಾಲಯ, ವಿಧಾನಸೌಧ, ಬೆಂಗಳೂರುರವರ ದಿನಾಂಕ:20-04-2021ರ ಆದೇಶ ಸಂಖ್ಯೆ: RD158TNR2020
2 ದಿನಾಂಕ: 21/04/2021ರಂದು ಕುಲಪತಿಗಳ ಸಭಾ ಕೊಠಡಿ, ಕುಲಪತಿಗಳ ಕಛೇರಿ, ಗಾಕೃವಿಕೇ-ಇಲ್ಲಿ ಜರುಗಿದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಸಭೆಯ ನಡಾವಳಗಳು
3 ಕುಲಪತಿಗಳು, ಕೃ.ವಿ.ವಿ., ಗಾಕೃವಿಕೇ, ಬೆಂಗಳೂರುರವರ ಅನುಮೋದನೆಯ ದಿನಾಂಕ: 21-04-2021

><<>><<>><

ರಾಜ್ಯದಲ್ಲಿ ಕಳೆದ ಎರಡು ವಾರಗಳಿಂದ ಕೋವಿಡ್-19 ಕೋರೋನಾ ಸೋಂಕು ಅತೀ ವೇಗವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು, ರಾಜ್ಯ ಕಾರ್ಯಕಾರಿ ಸಮಿತಿ ಕರ್ನಾಟಕ ಸರ್ಕಾರದ ಸಚಿವಾಲಯ, ವಿಧಾನಸೌಧ, ಬೆಂಗಳೂರುರವರ ಉಲ್ಲೇಖದ ದಿನಾಂಕ: 20-04-2021ರ ಆದೇಶದ ಮುಖಾಂತರ ಸೋಂಕನ್ನು ತಡೆಗಟ್ಟುವ ಸಲುವಾಗಿ ಕಠಿಣ ನಿರ್ಬಂಧಗಳ ಮಾರ್ಗಸೂಚಿಗಳನ್ನು ಹೊರಡಿಸಿದ್ದು ಸದರಿ ನಿರ್ಬಂಧಗಳು ದಿನಾಂಕ: 21-04-2021ರ ರಾತ್ರಿ 9.00 ಗಂಟೆಯಿಂದ 4ನೇ ಮೇ 2021ರ ಬೆಳಗ್ಗೆ 6 ಗಂಟೆ ವರೆಗೆ ಜಾರಿಗೆ ಬರುತ್ತವೆ.

ಸದರಿ, ಸರ್ಕಾರದ ದಿನಾಂಕ: 20-04-2021ರ ಆದೇಶದನ್ವಯ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದಂತೆ ಈ ಕೆಳಗಿನಂತೆ ನಿರ್ಬಂದಿತ ಆದೇಶಗಳನ್ನು ವಿಶ್ವವಿದ್ಯಾನಿಲಯದ ಅಧಿಕಾರಿಗಳು/ಬೋಧಕ/ ಬೋಧಕೇತರ ನೌಕರರು (ಗುತ್ತಿಗೆ ನೌಕರರು ಒಳಗೊಂಡಂತೆ) ಖಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ:

| | | |
|---|---|---|
| 1 | ವಾರಾಂತ್ಯದ ಕರ್ಫ್ಯೂ | ಸರ್ಕಾರದ ಆದೇಶದ ಅನುಬಂಧ 1B ರಲ್ಲಿ ಸೂಚಿಸಿರುವಂತೆ, ಶುಕ್ರವಾರ ರಾತ್ರಿ 9.00 ಗಂಟೆಯಿಂದ ಸೋಮವಾರ ಬೆಳಗ್ಗೆ 6.00 ಗಂಟೆವರೆಗೆ ಸಾರ್ವಜನಿಕರ ಓಡಾಟವನ್ನು ನಿರ್ಬಂದಿಸಲಾಗಿದ್ದು, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಕಛೇರಿಗಳು ದಿನಾಂಕ: 24/04/2021ರ ಶನಿವಾರ ಹಾಗೂ ಮೇ ಮಾಹೆಯ 2ನೇ ಮತ್ತು 4ನೇ ಶನಿವಾರಗಳಂದು ಮುಚ್ಚಲ್ಪಟ್ಟಿರುತ್ತವೆ. ಮುಂದುವರೆದು 3ನೇ ಹಾಗೂ 5ನೇ ಶನಿವಾರಗಳಂದು ಪೂರ್ತಿದಿನ (ಬೆಳಗ್ಗೆ 8.30 ರಿಂದ ಸಂಜೆ 4.00 ಗಂಟೆಯ ವರೆಗೆ) ಕಾರ್ಯ ನಿರ್ವಹಿಸುವುದು.<br><br>**ಹೊರತುಪಡಿಸಿ:** ಕೃಷಿ ವಿಶ್ವವಿದ್ಯಾನಿಲಯದ ಕೃಷಿ ಕ್ಷೇತ್ರದಲ್ಲಿ ಜಾನುವಾರುಗಳ ಆರೈಕೆಗಾಗಿ/ಸಂಶೋಧನೆ/ಪ್ರಯೋಗ ಮುಂತಾದ ಅತ್ಯಾವಶ್ಯಕ ಕಾರ್ಯ ಚಟುವಟಿಕೆಗಳಿಗೆ ಅವಶ್ಯಕವಾದ ಸಿಬ್ಬಂದಿಗಳು ಮಾತ್ರ ಸಂಬಂಧಪಟ್ಟ ಅಧಿಕಾರಿಯ ನಿರ್ದೇಶನದಂತೆ ಕಾರ್ಯ ನಿರ್ವಹಿಸುವುದು |
| 2 | ನಿರ್ಬಂಧಿಸಿದ ಚಟುವಟಿಕೆಗಳು | ಸದರಿ ಆದೇಶದ ಅನುಬಂಧ-1 ರ ಅಂಶ 3(ಎ) ಅನುಸಾರ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಮಹಾವಿದ್ಯಾಲಯಗಳಲ್ಲಿ ಎಲ್ಲಾ ಉಪನ್ಯಾಸ ಕೊಠಡಿಗಳು ಮುಚ್ಚಲ್ಪಟ್ಟಿರುತ್ತವೆ, ಹಾಗೂ 3(ಡಿ)ನ ಅನುಸಾರ ಶೈಕ್ಷಣಿಕ/ಸಾಂಸ್ಕೃತಿಕ ಒಗ್ಗೂಡುವಿಕೆಯನ್ನು ನಿರ್ಬಂದಿಸಿದೆ. ವಿದ್ಯಾರ್ಥಿಗಳೆಲ್ಲರಿಗೂ ಆನ್‌ಲೈನ್/ದೂರ ಶಿಕ್ಷಣವನ್ನು ಮುಂದುವರೆಸಲು ಅನುಮತಿಸಿದೆ. |
| 3. | ಕೋವಿಡ್-19ರ ನಿರ್ವಹಣೆಗಾಗಿ ಕಛೇರಿ ಸ್ಥಳದಲ್ಲಿ ಪಾಲಿಸಬೇಕಾದ ನಿರ್ದೇಶನಗಳು | 1 ಎಲ್ಲಾ ಸಿಬ್ಬಂದಿಗಳು ಮುಖಕ್ಕೆ (ಮಾಸ್ಕ್)ನ್ನು ತಪ್ಪದೇ ದರಿಸುವುದು<br>2 ಕನಿಷ್ಠ 6 ಅಡಿಗಳ ಸಾಮಾಜಿಕ ಅಂತರವನ್ನು ಪಾಲಿಸುವುದು<br>3 ಕಛೇರಿ ಆವರಣಗಳಲ್ಲಿ ಉಗುಳದಿರುವುದು |

ಪು.ತಿ.ನೋ

4 ಎಲ್ಲಾ ಕಛೇರಿಗಳಲ್ಲಿ ಕೈ ತೊಳೆಯಲು ಹ್ಯಾಂಡ್‌ವಾಷ್ ಇಡುವುದು, ಕಛೇರಿ ಪ್ರವೇಶ ಹಾಗೂ ನಿರ್ಗಮ ದ್ವಾರಗಳಲ್ಲಿ ಸ್ಯಾನಿಟೈಸರ್‌ಗಳನ್ನು ಇರಿಸುವುದು ಮತ್ತು ಥರ್ಮಲ್ ಸ್ಕ್ಯಾನಿಂಗ್ ವ್ಯವಸ್ಥೆಗಳನ್ನು ಮಾಡುವುದು

5 ಕಛೇರಿ ಸ್ಥಳಗಳನ್ನು ಆಗಾಗ್ಗೆ ಸ್ಯಾನಿಟೈಸ್ ಮಾಡುವುದು ಹಾಗೆಯೇ ಸಿಬ್ಬಂದಿಗಳು ಪದೇ ಪದೇ ಮುಟ್ಟುವ ಬಾಗಿಲ ಹಿಡಿ ಇತ್ಯಾದಿಗಳನ್ನು ಸಹ ಆಗಾಗ್ಗೆ ಸ್ಯಾನಿಟೈಸ್ ಮಾಡುವುದು

6 ಕಛೇರಿಯಲ್ಲಿ ಸಿಬ್ಬಂದಿಗಳು ಕಾರ್ಯ ನಿರ್ವಹಿಸುವ ಆಸನಗಳ ಅಂತರವನ್ನು ಹೆಚ್ಚಿಸುವುದು.

ಕೃವಿವಿ(ಬೆಂ)ನ ಎಲ್ಲಾ ಅಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಅಗತ್ಯ ಸೇವೆಗಳಿಗೆ ಈ ಅವಧಿಯಲ್ಲಿ ಅಡಚಣೆಯಾಗದಂತೆ ಸೂಕ್ತ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು.

ಆದೇಶದ ಮೇರೆಗೆ

ಆಡಳಿತಾಧಿಕಾರಿಗಳು

**ಪ್ರತಿಗಳು**

1. ಎಲ್ಲಾ ಅಧಿಕಾರಿಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
2. ವಿಶೇಷಾಧಿಕಾರಿಗಳು, ಕೃಷಿ ಮಹಾವಿದ್ಯಾಲಯ ಚಾಮರಾಜನಗರ
3. ವಿಶೇಷಾಧಿಕಾರಿಗಳು, ಕೃಷಿ ಇಂಜಿನಿಯರಿಂಗ್ ಮಹಾವಿದ್ಯಾಲಯ, ಗಾಕೃವಿಕೇ, ಬೆಂಗಳೂರು
4. ಎಲ್ಲಾ ಸಹ ಸಂಶೋಧನಾ ನಿರ್ದೇಶಕರುಗಳು, ಪ್ರಾಂತೀಯ ಕೇಂದ್ರಗಳು
5. ಕೋಆರ್ಡಿನೇಟರ್& ನೊಡಲ್‌ಆಫೀಸರ್, ಪಿ.ಪಿ.ಎಂ.ಸಿ., ಕುಲಪತಿಗಳ ಕಛೇರಿ, ಗಾ.ಕೃ.ವಿ.ಕೇ., ಬೆಂಗಳೂರು
6. ಮುಖ್ಯಸ್ಥರು, ಎ.ಕೆ.ಎಂ.ಯು. ಕೃವಿವಿ, ಗಾಕೃವಿಕೇ, ಬೆಂಗಳೂರು – ಕೃಷಿ ವಿಶ್ವವಿದ್ಯಾನಿಯಲಯದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಕೋರಲಾಗಿದೆ–AKMU @ UAS Bangalore.edu.in
7. ಎಲ್ಲಾ ಕೃಷಿ ವಿಜ್ಞಾನ ಕೇಂದ್ರಗಳ ಕಾರ್ಯಕ್ರಮ ಸಂಯೋಜಕರು/ಎಲ್ಲಾ ವಲಯ ಕೃಷಿ ಸಂಶೋಧನಾ ಕೇಂದ್ರಗಳು.
8. ಎಲ್ಲಾ ಹಿರಿಯ ಕ್ಷೇತ್ರಾಧೀಕ್ಷಕರುಗಳು ಹಾಗೂ ಕ್ಷೇತ್ರಾಧೀಕ್ಷಕರುಗಳು, ಪ್ರಾಂತೀಯ ಸಂಶೋಧನಾ ಕೇಂದ್ರಗಳು/ ಕೃಷಿ ಸಂಶೋಧನಾ ಕೇಂದ್ರಗಳು/ ಕೃವಿವಿಯ ಎಲ್ಲಾ ಪ್ರಾಯೋಜನೆಗಳು
9. ಅಧ್ಯಕ್ಷರು/ಪ್ರಧಾನ ಕಾರ್ಯದರ್ಶಿಗಳು, ಬೋಧಕರ ಸಂಘ, ಕೃ.ವಿ.ವಿ., ಗಾ.ಕೃ.ವಿ.ಕೇ., ಬೆಂಗಳೂರು
10. ಪ್ರಧಾನ ಕಾರ್ಯದರ್ಶಿಗಳು, ನೌಕರರ ಸಂಘ, ಕೃ.ವಿ.ವಿ., ಗಾ.ಕೃ.ವಿ.ಕೇ., ಬೆಂಗಳೂರು
11. ಕುಲಪತಿಗಳ ಕಾರ್ಯದರ್ಶಿಗಳು, ಕುಲಪತಿಗಳ ಕಛೇರಿ, ಕೃ.ವಿ.ವಿ., ಗಾ.ಕೃ.ವಿ.ಕೇ.,ಬೆಂಗಳೂರು
12. ಕಛೇರಿ ಕಡತಕ್ಕೆ